2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 60/2015

| | | |
|---|---|---|
| ಸಾಕ್ಷಿದಾರರ ಹೆಸರು | - ದರ್ಶನ್ | ಪಿಡಬ್ಲೂ -3 |
| ತಂದೆಯ ಹೆಸರು | - ತಿಲೋಕ್ ಚಂದ್ ಜೈನ್ | ಸಿಡಬ್ಲೂ -4 |
| ವಯಸ್ಸು | - 32 ವರ್ಷ | |
| ಉದ್ಯೋಗ | - ಅಂಗಡಿ ವ್ಯಾಪಾರ | |
| ವಾಸ ಸ್ಥಳ | - ಚಿಕ್ಕಮಗಳೂರು | |

ದಿನಾಂಕಃ 23.08.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಯಾರೆಂದು ನನಗೆ ಗೊತ್ತಿಲ್ಲ. ನಾನು ಆತನನ್ನು ಈ ಹಿಂದೆ ನೋಡಿಲ್ಲ. ಸಹ ಪಂಚರಾದ ಚಾಸಾ.3 ಗೊತ್ತು. ಚಾಸಾ.11 ಗೊತ್ತು, ಆತ ನಮ್ಮ ಜನಾಂಗದವನು. ಮೃತ ಪ್ರತಿಭಾ ಜೈನ್ ಗೊತ್ತು., ಆಕೆ ಸಹ ನಮ್ಮ ಜನಾಂಗದವಳು.

2. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ದಿನಾಂಕ 15.01.2015 ರಂದು ಸಾಕ್ಷಿಯ ಸಮಕ್ಷಮ ಪೊಲೀಸರು ಜರುಗಿಸಿದ್ದಾರೆ ಎಂದು ಹೇಳಲಾದ ಪಂಚನಾಮೆಯಾಗಿದ್ದು ಅದನ್ನು ನಿಪಿ.9 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು.

3. ದಿನಾಂಕ 15.01.2015 ರಂದು ಪ್ರತಿಭಾ ಜೈನ್ ರವರ ಮನೆಯಲ್ಲಿ ಸದರಿ ಸಹಿಯನ್ನು ಮಾಡಿದ್ದೇನೆ. ಆ ದಿನ ಚಾಸಾ.11 ರವರು ಬಸವನಹಳ್ಳಿ ಪೊಲೀಸರು ಅಲ್ಲಿ ಮಹಜರ್

ಮಾಡುತ್ತಿದ್ದಾರೆ ಬನ್ನಿ ಎಂದು ನನ್ನನ್ನು ಅಲ್ಲಿಗೆ ಕರೆಸಿದ್ದರು. ನಾನು ಅಲ್ಲಿಗೆ ಹೋದಾಗ ಮಧ್ಯಾಹ್ನ 12.30 ರಿಂದ 1.00 ಗಂಟೆಯಾಗಿತ್ತು. ನಾನು ಅಲ್ಲಿಗೆ ಹೋದಾಗ ಚಾಸಾ.11 ಮತ್ತು ಚಾಸಾ.3 ರವರು ಇದ್ದರು. ಅಲ್ಲಿದ್ದ ಒಂದು ಮೊಬೈಲ್, ಒಂದು ಆರ್ ಸಿ ಮತ್ತು ಡಿ ಎಲ್ ನ ಕಾರ್ಡುಗಳನ್ನು ಪೊಲೀಸರು ನನಗೆ ತೋರಿಸಿದರು. ಅವುಗಳನ್ನು ಹೊರತುಪಡಿಸಿ ಪೊಲೀಸರು ಬೇರೆ ಯಾವುದೇ ವಸ್ತುಗಳನ್ನು ತೋರಿಸಿಲ್ಲ. ಸದರಿ ಮನೆಯ ಹಾಲಿನಲ್ಲಿ ಒಂದು ಪರ್ಸ್ ಇತ್ತು, ಅದರಲ್ಲಿ ಸದರಿ ವಸ್ತುಗಳು ಇದ್ದವು. ಸದರಿ ವಸ್ತುಗಳನ್ನು ಪೊಲೀಸರಿಗೆ ಯಾರು ಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಮೊಬೈಲ್ ಸ್ಯಾಮ್ ಸಂಗ್ ಕಂಪನಿಗೆ ಸೇರಿದ್ದಾಗಿತ್ತು ಆದರೆ ಅದರ ಬಣ್ಣ ನನಗೆ ನೆನಪಿಲ್ಲ. ಸದರಿ ಆರ್ ಸಿ ಕಾರ್ಡಿನ ಮೇಲೆ ಸುಹೀಲ್ ಎಂಬ ಹೆಸರು ಇದ್ದದ್ದು ನೆನಪಿದೆ. ಸದರಿ ಮೊಬೈಲ್ ಮತ್ತು ಕಾರ್ಡುಗಳನ್ನು ಪ್ರತಿಭಾ ಜೈನ್ ರವರು ಮೃತಪಟ್ಟ ವಿಚಾರದಲ್ಲಿ ಪೊಲೀಸರು ತೆಗೆದುಕೊಂಡಿದ್ದಾರೆ.

4. ಅಲ್ಲಿ ಪೊಲೀಸರು ಮಧ್ಯಾಹ್ನ 1.15 ಗಂಟೆಯಿಂದ 1.45 ಗಂಟೆಯವರೆಗೆ ಮಹಜರ್ ಮಾಡಿಕೊಂಡರು. ಸದರಿ ಮಹಜರ್ ಗೆ ನಾನು, ಚಾಸಾ.3 ಮತ್ತು ಚಾಸಾ.11 ರವರು ಸಹಿ ಮಾಡಿದ್ದೇವೆ. ಸದರಿ ಮಹಜರ್ ನಲ್ಲಿ ಬರೆದಿರುವ ವಿಚಾರಗಳನ್ನು ತಿಳಿದುಕೊಂಡು ಸಹಿ ಮಾಡಿದ್ದೇನೆ.

5. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ ಮೇಲೆ ಹೇಳಿದಂತೆ ನಾನು ಮಹಜರ್ ಗೆಂದು ಹೋಗಿದ್ದ ಪ್ರತಿಭಾ ಜೈನ್ ರವರ ಮನೆ ಕಂಡು ಬರುತ್ತದೆ ಎಂದು

ನುಡಿದಿರುತ್ತಾರೆ. ಸದರಿ ಫೋಟೋದಲ್ಲಿ ಚಾಸಾ.3 ಮತ್ತು ಚಾಸಾ.11 ರವರು ಇರುವುದು ಕಂಡು ಬರುತ್ತದೆ. ಸದರಿ ಫೋಟೋವನ್ನು ನಿಪಿ.10 ಎಂದು ಗುರುತಿಸಲಾಯಿತು.

6. ಮೇಲೆ ಹೇಳಿದ ಮೊಬೈಲ್, ಆರ್ ಸಿ ಕಾರ್ಡ್ ಮತ್ತು ಡಿ ಎಲ್ ಗಳನ್ನು ನೋಡಿದರೆ ಗುರುತಿಸುತ್ತೇನೆ.

(ಈ ಹಂತದಲ್ಲಿ ಸದರಿ ಮುದ್ದೆ ಮಾಲುಗಳು ಟ್ರೆಷರಿ ಬಾಕ್ಸಿನಲ್ಲಿ ಇರಿಸಲಾಗಿದ್ದು ಸದರಿ ಬಾಕ್ಸನ್ನು ಈ ದಿನ ನ್ಯಾಯಾಲಯಕ್ಕೆ ತಂದಿಲ್ಲದಿರುವುದರಿಂದ ಸಾಕ್ಷಿಯ ಮುಂದಿನ ಮುಖ್ಯ ವಿಚಾರಣೆಯನ್ನು ಮಧ್ಯಾಹ್ನಕ್ಕೆ ಮುಂದುಾಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ದಿನಾಂಕಃ 23.08.2023 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

7. ಸಾಕ್ಷಿಯು ಒಂದು ಕಪ್ಪು ಬಣ್ಣದ ಬಿಳಿ ಪ್ಯಾನಲ್ ಹೊಂದಿರುವ ಫ್ಲಿಪ್ ಕವರ್ ಇರುವ ಸ್ಯಾಮ್ ಸಂಗ್ ಮೊಬೈಲ್, ಕೆ ಎ 18 ವೈ

3670 ನೋಂದಣಿ ಸಂಖ್ಯೆಯುಳ್ಳ ಹೋಂಡಾ ಆಕ್ಟೀವಾ ವಾಹನದ ಆರ್ ಸಿ ಕಾರ್ಡ್ ಮತ್ತು Suheel.M.A ಎಂಬುವವರ ಹೆಸರಿನಲ್ಲಿರುವ ಚಾಲನಾ ಪರವಾನಗಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು.ಮಾ.4 ರಿಂದ ಮು.ಮಾ.6 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

8. ನೀವು ಮಹಜರ್ ಗೆಂದು ಹೋದ ಸಮಯದಲ್ಲಿ ಚಾಸಾ.11 ರವರು ನಿಮ್ಮ ಮತ್ತು ಚಾಸಾ.3 ರವರ ಸಮಕ್ಷಮ ಎರಡು ಮೊಬೈಲುಗಳನ್ನು ಮತ್ತು ಒಂದು ಪರ್ಸನ್ನು ಪೊಲೀಸರಿಗೆ ಹಾಜರುಪಡಿಸಿ ಅವುಗಳನ್ನು ಮೃತಳು ಬಳಸುತ್ತಿದ್ದಾಗಿ ತಿಳಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಚಾಸಾ.11 ರವರು ಸದರಿ ಪರ್ಸ್ ನಲ್ಲಿದ್ದ ಬಿ ಎಸ್ ಎನ್ ಎಲ್ ಕಂಪೆನಿಗೆ ಸೇರಿದ ಸಿಮ್ ಸಂಖ್ಯೆಯನ್ನು ನಮೂದಿಸಲಾಗಿದ್ದ ಖಾಲಿ ಕಾರ್ಡನ್ನೂ ಸಹ ಹಾಜರುಪಡಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.

9. ಚಾಸಾ.11 ರವರು ನಿಮ್ಮ ಮತ್ತು ಚಾಸಾ.3 ರವರ ಸಮಕ್ಷಮ ನೀವು ಗುರುತಿಸಿದ ಮತ್ತು ಮೇಲೆ ಹೇಳಿದ ವಸ್ತುಗಳನ್ನು ಪೊಲೀಸರಿಗೆ ಹಾಜರುಪಡಿಸಿದ್ದರೂ ಸಹ ಆ ಬಗ್ಗೆ ನಿಮಗೆ ಗೊತ್ತಿಲ್ಲವೆಂದು ಮತ್ತು ಪೊಲೀಸರೇ ನಿಮಗೆ ತೋರಿಸಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ ಐ ಎಸ್ ಟಿ ವಕೀಲರಿಂದಃ ಆರೋಪಿ ಪರವಾಗಿಃ</u>

10. ನೀವು ಸಹಿ ಮಾಡಿರುವ ನಿಪಿ.9 ದಾಖಲೆಯಲ್ಲಿ ಬರೆದಿರುವ ವಿಚಾರಗಳು ಮತ್ತು ಆ ದಿನ ಮನೆಯ ಬಾಗಿಲನ್ನು ಯಾರು ತೆಗೆದಿದ್ದರು, ಮನೆಯ ಕೀ ಯಾರ ಬಳಿ ಇತ್ತು ಮತ್ತು ನಿರ್ದಿಷ್ಟವಾಗಿ ಪರ್ಸ್ ಯಾವ ಸ್ಥಳದಲ್ಲಿ ಇತ್ತು ಎಂದು ನಿಮಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ.10 ರಲ್ಲಿ ನೀವು ಕಂಡು ಬರುವುದಿಲ್ಲ ಎಂದರೆ ಸರಿ. ನೀವು ಹೇಳಿದಂತೆ ನೀವು ಸ್ಥಳಕ್ಕೆ ಹೋಗಿದ್ದೇ ಆಗಿದ್ದಲ್ಲಿ ನೀವೂ ಸಹ ಸದರಿ ಫೋಟೋಗೆ ನಿಂತುಕೊಳ್ಳುತ್ತಿದ್ದಿರಿ ಎಂದರೆ ಸಾಕ್ಷಿ ಪೊಲೀಸರು ನನ್ನನ್ನು ಫೋಟೋಗೆ ನಿಂತು ಕೊಳ್ಳುವಂತೆ ಕರೆದಿಲ್ಲ ಎಂದರೆ ಸರಿ. ನೀವು, ಮೃತಳು ಮತ್ತು ಚಾಸಾ.11 ರವರು ಒಂದೇ ಜನಾಂಗಕ್ಕೆ ಸೇರಿದವರಾಗಿರುವ ಕಾರಣ ನೀವು ಹೇಳಿದಂತೆ ಯಾವುದೇ ಸ್ಥಳಕ್ಕೆ ಹೋಗಿ ಸಹಿ ಮಾಡದೇ ಇದ್ದರೂ ಸಹ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ನಿಪಿ.9 ಮತ್ತು ನಿಪಿ.10 ದಾಖಲೆಗಳಿಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೀರಿ ಎಂದರೆ ಸರಿಯಲ್ಲ. ನೀವು ಹೇಳಿದಂತೆ ಯಾವುದೇ ಸ್ಥಳಕ್ಕೆ ಹೋಗಿಲ್ಲ, ಅಲ್ಲಿ ಯಾವುದೇ ವಸ್ತುಗಳನ್ನು ನೋಡಿಲ್ಲ ಮತ್ತು ಪೊಲೀಸರು ನಿಮ್ಮ ಸಮಕ್ಷಮ ಅವುಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಭಾನುಮತಿ ಬಿ.ಸಿ)

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೆಚ್